ಬಾಗಿಲನ್ನು ಮುಚ್ಚುತ್ತಾರೆ.

ಇದು ಇಡೀ ಸಿನಿಮಾ ಜರುಗುವ ಸ್ಥಳ. ಗುರು, ಶಿಷ್ಯ ಇಲ್ಲಿನ ಪ್ರಮುಖ ಮನುಷ್ಯ ಪಾತ್ರಗಳು. ಮನುಷ್ಯ ಪಾತ್ರಗಳು ಎಂದೇ ಉಲ್ಲೇಖಿಸಲು ಕಾರಣವಿದೆ. ಯಾಕೆಂದರೆ ಬಾಗಿಲು, ಮೀನುಗಳು, ಹಾವು, ದೋಣಿ, ಗುಡ್ಡ, ಬುದ್ಧನ ಮೂರ್ತಿ, ಕಾಮ, ಮೋಹ, ಕೋಪ, ವಾತ್ಸಲ್ಯ, ಅಸೂಯೆ ಎಲ್ಲವೂ ಈ ಚಿತ್ರದಲ್ಲಿ ಪಾತ್ರಗಳೇ ಆಗಿ ಬರುತ್ತವೆ. ಕಾಲ ಬದಲಾಗುತ್ತದೆ, ಪಾತ್ರಗಳು ಬರುತ್ತವೆ ಹೋಗುತ್ತವೆ. ನಿಸರ್ಗ, ಕಾಲದ ಅಂಗಡಿಯಲ್ಲಿ ಹಳೆ ಉಡುಪು ಕಳಚಿ ಹೊಸ ಉಡುಪು ತೊಟ್ಟುಕೊಳ್ಳುತ್ತದೆ. ಆದರೆ ಆ ಜಾಗ ಮಾತ್ರ ಹಾಗೆಯೇ ಉಳಿದಿರುತ್ತದೆ.

ಝೆನ್ ತತ್ವಜ್ಞಾನದ ಹಿನ್ನೆಲೆಯಲ್ಲಿ ಪ್ರಕೃತಿ ಮತ್ತು ಸಂಸ್ಕೃತಿಯ ನಡುವಿನ ಪ್ರೇಮ–ಸಂಘರ್ಷದ ಸಂಬಂಧ, ಮನುಷ್ಯನನ್ನು ಎಡಬಿಡದೇ ಕಾಡುವ ಆಳದ ನೋವಿನ ಮೂಲವನ್ನು ಶೋಧಿಸುವ ಪ್ರಯತ್ನ ಈ ಸಿನಿಮಾದ ಆತ್ಮವನ್ನು ರೂಪಿಸಿದೆ. ಇದು ಕಿಮ್ ಕಿ ಡುಕ್‌ನ ಒಟ್ಟಾರೆ ಸಿನಿಮಾಯಾನದ ಕೇಂದ್ರಶೋಧವೂ ಹೌದು.

ಒಂದು ದಿನ ಗುರುವನ್ನು ನೋಡುತ್ತಲೇ ದೋಣಿ ಹುಟ್ಟು ಹಾಕುವುದನ್ನು ಕಲಿತ ಪುಟಾಣಿ ಶಿಷ್ಯ, ಸರೋವರ ದಾಟಿ ಬೆಟ್ಟಕ್ಕೆ ಹೋಗುತ್ತಾನೆ. ಅಲ್ಲಿ ಒಂದು ಮೀನು, ಒಂದು ಕಪ್ಪೆ ಮತ್ತೊಂದು ಹಾವು ಹಿಡಿದು ಅವುಗಳ ಮೈಗೆ ಹಗ್ಗ ಕಟ್ಟಿ ಹಗ್ಗದ ಇನ್ನೊಂದು ತುದಿಗೆ ಕಲ್ಲು ಕಟ್ಟಿ ಅವುಗಳು ಒದ್ದಾಡುವುದನ್ನು ನೋಡಿ ಸಂಭ್ರಮಿಸುತ್ತಾನೆ. ಬಾಲಕನ ಈ ವರ್ತನೆಯನ್ನು ನೋಡಿಯೂ ಗುರು ಸುಮ್ಮನಿರುತ್ತಾನೆ.

ಮರುದಿನ ಬಾಲಕ ಹಾಸಿಗೆಯಿಂದ ಏಳುವ ಹೊತ್ತಿಗೆ ಬಾಲಕನ ಸೊಂಟಕ್ಕೆ ಭಾರವಾದ ಕಲ್ಲೊಂದು ಬಿಗಿದುಕೊಂಡಿರುತ್ತದೆ. ಪ್ರಯಾಸದಿಂದ ಎದ್ದು ಬಂದು ಗುರುಗಳ ಬಳಿ ನಿಂತು 'ಗುರುಗಳೇ ಈ ಕಲ್ಲಿನಿಂದ ನನ್ನನ್ನು ಬಿಡಿಸಿ' ಎಂದು ಬೇಡಿಕೊಳ್ಳುತ್ತಾನೆ. ಆಗ ಗುರು 'ಕಲ್ಲು ಹೊರುವ ಕಷ್ಟ ಈಗ ಗೊತ್ತಾಯಿತೆ ನಿನಗೆ? ನಿನ್ನ ಬಳಿ ಹೊರಲಾಗದ ಭಾರವನ್ನು ಆ ಪ್ರಾಣಿಗಳು ಹೊರುತ್ತವೆ ಎಂದು ಹೇಗೆ ಅಂದುಕೊಂಡೆ. ಈಗಲೇ ಹೋಗಿ ಅವುಗಳನ್ನು ಬಿಡಿಸಿ ಬಾ. ಅವುಗಳಲ್ಲಿ ಯಾವುದಾದರೂ ಒಂದು ಪ್ರಾಣಿ ಸತ್ತುಹೋಗಿದ್ದರೂ ನೀನು ಈ ಕಲ್ಲನ್ನು ಆಜೀವಪರ್ಯಂತ ಎದೆಯಲ್ಲಿ ಹೊತ್ತು ತಿರುಗಬೇಕಾಗುತ್ತದೆ' ಎನ್ನುತ್ತಾನೆ. ಬೆಟ್ಟದ ಬಳಿಗೆ ಓಡಿದ ಬಾಲಕನಿಗೆ ಮೊದಲು ಎದುರಾಗುವುದು ನೀರಿನಲ್ಲಿ ಮುಳುಗಿರುವ ಸತ್ತ ಮೀನು. ಇನ್ನೂ ಜೀವಂತವಿರುವ ಕಪ್ಪೆ. ರಕ್ತದ ಮಡುವಿನಲ್ಲಿ ಸತ್ತುಬಿದ್ದಿರುವ ಹಾವು.

ಮನುಷ್ಯ ಹುಟ್ಟಾ ಕ್ರೂರಿ. ಮನುಷ್ಯತ್ವ ಎನ್ನುವುದು ಅವನಿಗೆ ಜನ್ಮಜಾತವಾಗಿ ಇರುವುದಲ್ಲ, ರೂಢಿಸಿಕೊಳ್ಳಬೇಕಾದದ್ದು. ಹಾಗೆ ರೂಢಿಸಿಕೊಂಡಿದ್ದು, ರೂಪಿಸಿಕೊಂಡಿದ್ದು ಸಂಸ್ಕೃತಿ. ಕ್ರೌರ್ಯ ಎನ್ನುವುದು ಅವನ ಪ್ರಕೃತಿ. ತಾನು ಮಾಡಿದ ಕ್ರೂರ ಕರ್ಮಗಳನ್ನು ಬೇರೆ ಬೇರೆ ಬಗೆಗಳಲ್ಲಿ ಅವನು ತಿರುಗಿ ಅನುಭವಿಸುತ್ತಲೇ ಇರುತ್ತಾನೆ. ಹಾಗೆ ಅನುಭವಿಸುತ್ತಲೇ ಸತ್ಯವನ್ನು ಕಂಡುಕೊಳ್ಳುತ್ತಾನೆ. ಸತ್ಯವನ್ನು ಅರಿತ ಮನುಷ್ಯರಿಂದ ಮನುಕುಲದ ಬವಣೆಗಳೇನೂ ಬದಲಾಗುವುದಿಲ್ಲ. ಎಷ್ಟೆಲ್ಲ ಸುತ್ತಿಯೂ ಅವನು ಬಂದು ನಿಲ್ಲುವುದು ಹೊರಟು ನಿಂತಲ್ಲಿಗೇ. ಅದೊಂದು ಬಗೆಯ ಆವರ್ತನ. ಮನುಷ್ಯನ ಮನಸ್ಸಿನ ವಿಕಾಸ ನೇರವಾದ ಹರಿವಲ್ಲ, ಅದು ಅದೇ ವೃತ್ತದಲ್ಲಿ ಮತ್ತೆ ಮತ್ತೆ ಸುತ್ತುವ ಆವರ್ತನ ಸ್ವರೂಪದ್ದು. ಈ ಸಿನಿಮಾ ಕೂಡ ಆ ಆವರ್ತನದ ಸುತ್ತಲೂ ಹೆಣೆದುಕೊಂಡಿದೆ.